

# ಹೊಟ್ಟೆ ಡಾಕ್ಟರ ಗಣಪ ಪ್ರೇಮ

ವೃತ್ತಿಯಿಂದ ಗ್ಯಾಸ್ಟ್ರೊ ಸರ್ಜನ್ ಆಗಿರುವ ಡಾ. ಪ್ರಸಾದ್ ಕವಟೇಕರ್, ಪ್ರವೃತ್ತಿಯಿಂದ ಕಲಾವಿದ. ಮಣ್ಣಿನಿಂದ ಗಣೇಶ ಮೂರ್ತಿಗಳನ್ನು ಮಾಡುವ ಕೆಲಸವನ್ನು ದಶಕಗಳಿಂದ ವ್ರತದಂತೆ ಮಾಡಿಕೊಂಡು ಬಂದಿದ್ದಾರೆ.

■ ಸುಧೀಂದ್ರ ಪ್ರಸಾದ್ ಇ.ಎಸ್.

ಗಣೇಶ ಮೂರ್ತಿ ತಯಾರಿಯಲ್ಲಿ ತಂದೆ–ಮಗ



ಬಾದರಾಯಣ ಸಂಬಂಧವೆಂದರೆ ಇದೇ ಇರಬೇಕು – ವೃತ್ತಿಯಿಂದ ವೈದ್ಯರಾದ ಡಾ. ಪ್ರಸಾದ್ ಕವಟೇಕರ್ ಅವರು ಪ್ರವೃತ್ತಿಯಿಂದ ಕಲಾವಿದ; ಮಣ್ಣಿನಿಂದ ಗಣಪತಿ ಮೂರ್ತಿಗಳನ್ನು ಮಾಡುವ ಕಲಾವಿದ.

ಪ್ರಸಾದ್‌ರಿಗೂ ಗಣಪತಿಗೂ ಎತ್ತಣಿಂದೆತ್ತಣ ಸಂಬಂಧ?. ಆ ಸಂಬಂಧವನ್ನು ಹೀಗೆ ಹೇಳಬಹುದು. ಗಣಪತಿಯ ಆಕೃತಿಯಲ್ಲಿ ಎದ್ದುಕಾಣುವುದು ಆತನ ಮುಖ ಹಾಗೂ ಹೊಟ್ಟೆಯಷ್ಟೇ. ಪ್ರಸಾದ್ ಅವರು ಹೊಟ್ಟೆಯ ಡಾಕ್ಟರ್. ಈ ಹೊಟ್ಟೆಯ ನಂಟು ಇಬ್ಬರನ್ನೂ ಬೆಸೆದಿರಬಹುದೆ?

ಉದರ ಸಮಸ್ಯೆಗಳ ಶಸ್ತ್ರಚಿಕಿತ್ಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಪ್ರಸಾದ್ ಕವಟೇಕರ್ ಅವರಿಗೆ ಕರ್ತವ್ಯದ ನಡುವೆ ಬಿಡುವು ಸಿಗುವುದು ಅಪರೂಪ. ಸದ್ಯ ರಾಯಚೂರಿನಲ್ಲಿ ಗ್ಯಾಸ್ಟ್ರೊ ಸರ್ಜನ್ ಆಗಿರುವ ಪ್ರಸಾದ್, ಬಿಡುವಿಲ್ಲದ ವೈದ್ಯಕೀಯ ವೃತ್ತಿಯ ನಡುವೆಯೂ ಗಣೇಶ ಹಬ್ಬಕ್ಕಾಗಿ ಗಣಪತಿಯ ಮೂರ್ತಿ ಮಾಡಲಿಕ್ಕೆ ಕೂರುತ್ತಾರೆ. ಈ ಗಣಪನ ನಂಟು ಬಾಲ್ಯದಿಂದಲೂ ಹಿಂಬಾಲಿಸಿಕೊಂಡು ಬಂದಿರುವಂತಹದ್ದು.

ತಲೆಮಾರುಗಳಿಂದಲೂ ಕಲೆಯನ್ನು ಆರಾಧಿಸಿಕೊಂಡು ಬರುತ್ತಿರುವ ಕುಟುಂಬ ಡಾ. ಪ್ರಸಾದ್ ಅವರದು. ಪ್ರತಿ ವರ್ಷ ಗಣೇಶ ಹಬ್ಬದ ಸಂದರ್ಭದಲ್ಲಿ ಮಣ್ಣಿನಿಂದ ಗಣೇಶ ಮೂರ್ತಿ ಮಾಡುವ ಕಾಯಕವನ್ನು ಅವರು ನಡೆಸಿಕೊಂಡು ಬಂದಿದ್ದಾರೆ. ಮನೆಗೆ ಮಾತ್ರವಲ್ಲದೆ, ಒಂದಷ್ಟು ಹೆಚ್ಚುವರಿ ಗಣೇಶನ ಮೂರ್ತಿಗಳನ್ನೂ ಪ್ರಸಾದ್‌ರ ಕುಟುಂಬ ಮಾಡುತ್ತದೆ. ಅವರ ವೈದ್ಯ ಪತ್ನಿ ಡಾ. ನಿವೇದಿತಾ ಹಾಗೂ 10 ವರ್ಷ ಪುತ್ರ ಅದ್ವೈತ್ ಕೂಡ ಹಸಿ ಮಣ್ಣಿಗೆ ರೂಪ ನೀಡುವ ಕಾಯಕದಲ್ಲಿ ಜೊತೆಯಾಗುತ್ತಾರೆ.

‘ತಂದೆಯ ಮುತ್ತಜ್ಜ ತಿಪ್ಪಾಜಪ್ಪ ಅವರು ಮೈಸೂರು ಅರಮನೆಯ ಕಲಾವಿದರಾಗಿದ್ದರು.